

# ದುಬಾರಿ ಶ್ವಾನ!



ಇತ್ತೀಚಿನ ದಿನಗಳಲ್ಲಿ ಶ್ವಾನ ಪೋಷಣೆ ಫ್ಯಾಷನ್ ಆಗಿದೆ. ಐಶಾರಾಮಿ ಮನೆಯ ಮುಂದೆ ದುಬಾರಿ ನಾಯಿ ಮಾಮೂಲಿಯಾಗಿ ಬಿಟ್ಟಿದೆ. ಕೆಲವರು ಒಂದು ಮನೆ ಕಟ್ಟಲು ತಗಲುವಷ್ಟು ಹಣವನ್ನು ಕೇವಲ ಒಂದು ನಾಯಿಗೆ ಸುರಿಯುತ್ತಿದ್ದಾರೆ.

ಅಂದಹಾಗೆ ಈ ನಾಯಿಯ ಬೆಲೆ ಬರೋಬ್ಬರಿ ₹ 26 ಲಕ್ಷ. ನಿಮಗೆ ಆಶ್ಚರ್ಯವಾದರೂ ನಂಬಲೇ ಬೇಕು. ತಮಿಳು ನಟಿ ಭಾನುಪ್ರಿಯ ಅವರ ಸೋದರ ಚೆನ್ನೈನ ಗೋಪಾಲಕೃಷ್ಣ ಅವರ ಶ್ವಾನವಿದು. ಇಂಗ್ಲಿಷ್ ಶೆಟರ್ ತಳಿಯ ಈ ನಾಯಿಯನ್ನು ಬ್ರೆಜಿಲ್‌ನಿಂದ ವರ್ಷದ ಹಿಂದೆ ಖರೀದಿಸಲಾಗಿದೆ.

ಭಾರತದ ಹವಾಗುಣ ಈ ನಾಯಿಗೆ ಒಗ್ಗುವುದಿಲ್ಲ. ಹೀಗಾಗಿ, ಗೋಪಾಲಕೃಷ್ಣ ಅವರು, ಈ ನಾಯಿ ವಾಸಕ್ಕೆ ಪ್ರತ್ಯೇಕ ಹವಾನಿಯಂತ್ರಣ ಕೊಠಡಿಯನ್ನು ನಿರ್ಮಿಸಿದ್ದಾರೆ. ಅಲ್ಲದೆ, ಈ ನಾಯಿಯನ್ನು ಸ್ಪರ್ಧೆಗೆ ಕೊಂಡೊಯ್ಯಲೆಂದೇ ಹವಾನಿಯಂತ್ರಿತ ಟೆಂಪೊ ಟ್ರಾವೆಲರ್ ವ್ಯವಸ್ಥೆ ಮಾಡಿದ್ದಾರೆ. ನಾಯಿಯ ಆರೋಗ್ಯ ವಿಚಾರಣೆಗೆ ಒಬ್ಬರು ಪಶುವೈದ್ಯರು, ನಿರ್ವಹಣೆಗಾಗಿ ಇಬ್ಬರು ಕಾರ್ಮಿಕರನ್ನು ನೇಮಿಸಿದ್ದಾರೆ. ನಾಯಿಯ ಆಹಾರಕ್ಕಾಗಿ ಮಾಸಿಕ ₹ 20 ಸಾವಿರ ಕರಗಿಸುತ್ತಿದ್ದಾರೆ. ಈ ನಾಯಿಯ ನಿರ್ವಹಣೆಗೆ ವಾರ್ಷಿಕ ₹ 4ರಿಂದ 5 ಲಕ್ಷ ವ್ಯಯ ಮಾಡುತ್ತಾರೆ.

ಭಾರತದ ವಿವಿಧೆಡೆ ನಡೆದ ಶ್ವಾನಸ್ಪರ್ಧೆಯಲ್ಲಿ ಈ ನಾಯಿ 17ಕ್ಕೂ ಅಧಿಕ ಪ್ರಶಸ್ತಿಯನ್ನು ಪಡೆದಿದೆ. ಈಚೆಗೆ ಮೈಸೂರಿನಲ್ಲಿ ನಡೆದ ಅಖಿಲ ಭಾರತ ಚಾಂಪಿಯನ್‌ಷಿಪ್ ಶ್ವಾನಸ್ಪರ್ಧೆಯಲ್ಲಿ ಇದೇ ನಾಯಿ ಮೂರು ವಿಭಾಗಗಳಲ್ಲಿ ಪ್ರಶಸ್ತಿ ಬಾಚಿಕೊಂಡಿತು.

■ ಪ್ರದೀಶ್ ಎಚ್.